12

# ದೇವರು ಮತ್ತು ನಿಂದನೆ (4:11, 12)

ಕಳೆದ ವರ್ಷದಲ್ಲಿ ಜಿಮ್ ಬೇಕರ್ ಮತ್ತು PTL ಕ್ಲಬ್‌ನ ನಷ್ಟದ ಕುರಿತಾಗಿ ಸುದ್ಧಿ ಮಾಧ್ಯಮಗಳಲ್ಲಿ ತಿಳಿದುಕೊಂಡಿದ್ದೇವೆ. ಈಗ ಆ ಸುದ್ದಿಯು: ಅಂತರ್ ಜಾಲ ಸುದ್ದಿ ಕಾರ್ಯಕ್ರಮದಲ್ಲಿಯು, ವಾರಪತ್ರಿಕೆಯಲ್ಲಿಯೂ, ಮತ್ತು ಚಿಕ್ಕ ಚಿಕ್ಕ ಅಂಗಡಿಗಳಲ್ಲಿಯೂ ಅದರ ವಿಷಯಗಳನ್ನು ಜನರನ್ನು ಉಲ್ಲೇಖಿಸುತ್ತಿದ್ದಾರೆ. ಅದನ್ನು ನ್ಯಾಯ ಸಮ್ಮತಪಡಿಸಲು ವಕೀಲರು ಸಹ ಮಾತನಾಡಿ ಹಾಸ್ಯಗಾರನು ಹೇಳಿದಂತ ಹಾಸ್ಯ ಕುರಿತು ಮಾತನಾಡಿದ್ದಾನೆ.

ದೇವರ ಸೇವೆಯಲ್ಲಿರುವವರ ಕುರಿತಾಗಿ ಇಂತಹ ಅವಮಾನಕರವಾದ ಅಂತೆಕಂತೆಗಳ ಮಾತುಗಳುಂಟಾದರೆ? ದೇವರ ಮಗನಾಗಿರಬೇಕಾದವನು ಬಿದ್ದು ಹೋದರೆ ಸೈತಾನನು ಆ ವಿಷಯದಲ್ಲಿ ಆನಂದಿಸುತ್ತಾನೆ. ಆದುದರಿಂದ ಪ್ಯಾಟ್‌ರಾಬರ್ಟ್‌ಸನ್‌ರವರ ಹಿರಿಯ ಮಗನು ಮದುವೆಗಿಂತ ಮುಂಚೆಯೇ ಹುಟ್ಟಿದವನೆಂದು ಸುದ್ದಿ ಮಾಧ್ಯಮಗಳು ಪ್ರಕಟಿಸಿವೆ. ಆದುದರಿಂದ ಪ್ರಪಂಚವು ಈ ಸುದ್ದಿಯಲ್ಲಿ ಆನಂದಿಸಿತು ಮತ್ತು ದೇವರು ಅವನನ್ನು ಒತ್ತೆಯಾಳನ್ನಾಗಿಟ್ಟಿದ್ದಾನೆಂದು ಓರಲ್ ರಾಬರ್ಟ್‌ರವರು ತಿಳಿಸಿದ್ದಾರೆ. ಆದುದರಿಂದ ಜಿಮ್ಮ್ ಸ್ವಗಾರ್ಟ್ ಈ ಸುದ್ಧಿಯನ್ನು ಮುಖ್ಯ ಕಥೆಯನ್ನಾಗಿ ಸುದ್ಧಿ ಮಾಧ್ಯಮದಲ್ಲಿ ಪ್ರಕಟಪಡಿಸಲು ಹುಚ್ಚು ಸಾಹಸವನ್ನು ಮಾಡಿದ್ದಾರೆ. ಲೋಕವು ಈ ಕಥೆಯನ್ನು ಮಾತ್ರ ತಿಳಿಯಬಯಸದೆ; ಅದರ ವಿವರಣೆಯನ್ನು ಅರಿಯಲು ಮುಂದಾಗಿದ್ದಾರೆ. ಪ್ರಪಂಚವು ಮಾತ್ರ ಈ ಪರಿಸ್ಥಿತಿಯನ್ನು ಪ್ರೀತಿಸುತ್ತದೋ? ನಾವೆಲ್ಲರೂ ಅದನ್ನು ಮಾಡುತ್ತೇವೆ. ಪರಸ್ಪರ ಬೋಧಕರಲ್ಲಿಯು ಈ ವಿಧವಾದ ಅಂತೆಕಂತೆಗಳ ಸುದ್ದಿಯು ಇರುವದನ್ನು ನಾನು ಕೇಳಿದ್ದೇನೆ. ಅದನ್ನೊಪ್ಪಿಕೊಳ್ಳಲು ಮನಸ್ಸಿಲ್ಲದೆ ಹೋದರು, ಇದು ಸರಿಯಾದದ್ದೆಂದು ನೆನಸುತ್ತೇನೆ. ಈ ಅಂತೆಕಂತೆಗಳ ಮಾತಿಗೆ ಯಾರು ಬಲಿಯಾದರು ಮತ್ತು ಯಾಕೆ ಎಂಬುದನ್ನು ಅರಿಯುತ್ತೇವೆ; ನೈತಿಕ ವಾಗಿ ತಪ್ಪು ಮಾಡಿದವನು ಯಾರು ಮತ್ತು ಅದರ ಉದ್ದೇಶವೇನು, ಅದರಿಂದ ಅವನಿಗೆ ಲಾಭವೇನು.

ಅಂತಹ ಸನ್ನಿವೇಶಗಳನ್ನು ಮಾತಾಡಲು ಲೋಕದಲ್ಲಿರುವವರು ಮಾತ್ರವೇ ಪ್ರೀತಿ ಸುತ್ತಾರೆ? ನಾವೆಲ್ಲರು ಕೂಡ ಮಾಡುತ್ತೇವೆ. ಒಬ್ಬರ ಬಗ್ಗೆ ಒಬ್ಬರು ಹರಟೆ ಮಾತಾಡುವದರಲ್ಲಿ ಪ್ರಸಂಗಿಕರು ಎಲ್ಲಾರಿಗಿಂತ ಹೆಚ್ಚಾಗಿ ಮಾತಾಡುವರೆಂದು ನಾನು ಕೇಳಿದ್ದೇನೆ. ಅದನ್ನು ಒಪ್ಪಿಕೊಳ್ಳಲು ನನಗೆ ನೋವನ್ನು ಉಂಟುಮಾಡುತ್ತದೆ, ಆದರೆ ಅದು ನಿಜವೆಂದು ನಂಬುತ್ತೇನೆ ಯಾರು, ಏನಕ್ಕೆ ನಿಂದಿಸಲ್ಪಟ್ಟರು, ಉದ್ಯೋಗದಿಂದ ಅಥವಾ ನೀತಿ ಸಂಬಂಧ ತಪ್ಪುಗಳನ್ನು ಮಾಡಿದವನು ಯಾರು, ಎಂತಹ ಸಂಬಳಗಳು ಇವೆ ಎಂಬುದರ ಬಗ್ಗೆ ನಾವು ಸಾಮಾನ್ಯವಾಗಿ ಅರಿತಿದ್ದೇವೆ. ಅವುಗಳನ್ನು ಎದುರಿಸೋಣ. ಹೆಚ್ಚಾಗಿ ಕ್ರೈಸ್ತರು ಕ್ರೈಸ್ತರ ಬಗ್ಗೆ ಮಾತಾಡುವವರು ಕಾಣಿಸುತ್ತಾರೆ. ನಮ್ಮಲ್ಲಿ ಯಾರಾದರು ಒಬ್ಬರು ದೊಡ್ಡ ತಪ್ಪನ್ನು ಮಾಡಿದರೆ ಆ ಸಂದೇಶವು ಬೆಂಕಿಯಂತೆ ಹರಡುಕೊಳ್ಳುತ್ತದೆ. ಈ ಕೆಟ್ಟ ಸಂದೇಶದ ಹರಡುವಿಕೆಯಿಂದ ಹಲವಾರು ಆರಾಧನೆಗೆ ಬರುವದನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟು ಅಥವಾ ಒಂದು ಸಭೆಯಿಂದ ಮತ್ತೊಂದು ಸಭೆಗೆ ತಿರುಗಾಡುತ್ತಿರುವವರನ್ನು ನಾವೆಲ್ಲರು ಕಂಡಿದ್ದೇವೆ. ಒಬ್ಬರ ಮೇಲೊಬ್ಬರು ಕೆಟ್ಟದ್ದನ್ನು ಅರಿತು ಹರಡುವದರಲ್ಲಿ ಏಕೆ ನಾವು ಸಂತೋಷಿಸುತ್ತೇವೆ?

ನಾವು ನಂಬಿದಂತೆ ಜೀವಿಸಬೇಕೆಂಬುದೆ ಯಾಕೋಬನ ಸಂದೇಶವಾಗಿದೆ, ನಾವು ಇತರರನ್ನು ನಿಂದಿಸಬಾರದೆಂಬ ಅಪ್ಪಣೆಯನ್ನು ನೀಡಿದ್ದಾನೆ. ಪುನಃ ಇನ್ನೊಂದು

ವಿಶೇಷವಾದ ಅಂಶವನ್ನು ತಿಳಿಸಿ: ಕ್ರೈಸ್ತನು, ನಂಬಿಕೆಯಲ್ಲಿರುವದರಿಂದ, ವ್ಯತ್ಯಾಸ ವಾದ ಜೀವಿತವನ್ನು ಜೀವಿಸಬೇಕೆಂದು ತಿಳಿಸುತ್ತಾನೆ. ಆದುದರಿಂದ ಯಾಕೋಬನು ನಿಂದಿಸಬೇಡಿರಿ ಎಂಬ ವಿಷಯದಲ್ಲಿ ನಾಲ್ಕು ಕಾರಣಗಳನ್ನು ನೀಡುತ್ತಾನೆ.

## ನಿಯಮ (4:11)

"ಸಹೋದರರರೇ ಒಬ್ಬರನ್ನೊಬ್ಬರು ನಿಂದಿಸಬೇಡಿರಿ" (ಯಾಕೋಬ 4:11ಎ). ಎಂದು ಸರಳವಾಗಿಯೂ ನೇರವಾಗಿಯೂ ಉತ್ತರಿಸಿದ್ದಾನೆ: ಈ ಸರಳವಾದ ಅಪ್ಪಣೆಯ ಮೂಲಕ ಪರಸ್ಪರ ಕ್ರೈಸ್ತರ ಭಾಷಾಸಂವಾದವು ನಿಯಮಕ್ಕೆ ಒಳಗಾಗುತ್ತದೆ. ಸಹೋದರರರ ಮಧ್ಯದಲ್ಲಿ ನಿಂದನೆಯ ಮಾತುಗಳು ಉದ್ಭವಿಸಿದ್ದವೆಂದು ಮೂಲ ಭಾಷೆಯು ತಿಳಿಸುತ್ತದೆ. ಸರಳವಾದ ಅಪ್ಪಣೆಯು ಅಲ್ಪವಾದ ವಿವರಣೆಯನ್ನು ಹೊಂದಿರುತ್ತದೆ.

ಇತರರನ್ನು ನಿಂದಿಸುವ ಕುರಿತು ದೇವರು ಯಾವುದೇ ಒಳ್ಳೆಯ ಅಭಿಪ್ರಾಯವನ್ನು ಹೊಂದಿರಲಿಲ್ಲ (ಜ್ಞಾನೋಕ್ತಿ 20:19; 26:20; ರೋಮಾಪುರ 1:29, 30; 1 ಕೋರಿಂಥ 6:10). ದೇವರ ದೃಷ್ಟಿಯಲ್ಲಿ ಹೀನವಾಗಿರುವ ಈ ಕಾರ್ಯವನ್ನು ಯಾಕೆ ಮಾಡಬೇಕು? "ಜನರು ಪರಸ್ಪರ ನಿಂದನೆಗೆ ಒಳಗಾಗುವಾಗ ಆ ಸಮಯದಲ್ಲಿ ಮಾತ್ರ ಜನರು ನಿಂದನೆಯ ಕುರಿತು ಬೇಸರಗೊಳ್ಳುತ್ತಾರೆ." ಆಗ ಮಾತ್ರ ಅವರ ಭಾವನೆಗಳನ್ನು ತಿಳಿಯಬಹುದು. ನಮ್ಮ ಕ್ರಿಯೆಗಳು ಒಳ್ಳೆದೆಂದು ತಿಳಿದು ಇತರರ ಕ್ರಿಯೆಗಳು ಒಳ್ಳೇ ಯದಲ್ಲವೆಂದು ತಿಳಿಯು ವಾಗ ನಾವೇ ಉತ್ತಮರೆಂದು ಅನಿಸಿಕೆ ಉಂಟಾಗುತ್ತದೆ. ಈ ಕಾರಣದಿಂದ ಇತರರನ್ನು ನಿಂದಿಸುತ್ತೇವೆ.

ನಾವು ಇತರರ, ಬಗ್ಗೆ ಮಾತನಾಡಬಾರದೆಂಬುದಕ್ಕೆ ಒಂದು ಅಂಶವನ್ನು ಸ್ಪಷ್ಟಪಡಿಸಿ ಕೊಳ್ಳೋಣ ಇತರ ಸಹೋದರರ ಬಗ್ಗೆ ಮಾಡುವಂತ ನಿಂದನೆಯು ಸತ್ಯವಾದದ್ದೆಂಬುದಾಗಿ ತಿಳಿಯುತ್ತೇವೆ. *ಆದರೆ* ಯಾಕೋಬನು ಈ ವಿಷಯವನ್ನು ತಿಳಿಸುತ್ತಿರುವದಿಲ್ಲ! ಈ ಒಂದು ಅಪ್ಪಣೆಗೆ ಯಾರು ಯೋಗ್ಯರಾಗಿರುವದಿಲ್ಲ. ಯಾಕೋಬನು ದೇವರಾತ್ಮ ಪ್ರೇರಿತನಾಗಿ, ಸರಳವಾಗಿ ತಿಳಿಸುವದೇನೆಂದರೆ ಒಬ್ಬರನ್ನೊಬ್ಬರು ನಿಂದಿಸಬೇಡಿರಿ.

## ಅಪ್ಪಣೆಯ ತರ್ಕಸಮ್ಮತವಾದ ವಿವರಣೆ (4:11, 12)

### ಅವುಗಳನ್ನು ಗೌರವಿಸಿರಿ

ಒಬ್ಬರಿಗೊಬ್ಬರು ಗೌರವವನ್ನು ಹೊಂದಿರುವ ಕಾರಣದಿಂದ ಪರಸ್ಪರ ನಿಂದಿಸಬಾರದು. ಈ ವಾಕ್ಯದಲ್ಲಿ "ಸಹೋದರತ್ವದ" ಸಾಕ್ಷಿಯನ್ನು ಒತ್ತಿ ಹೇಳಲಾಗಿದೆ. ವಚನ 11ರಲ್ಲಿ "ಒಬ್ಬರನ್ನೊಬ್ಬರು ನಿಂದಿಸಬೇಡಿರಿ. *ಯಾವನಾದರೂ ತನ್ನ ಸಹೋದರನ್ನು ನಿಂದಿಸಿದರೇ, ಅವನು ತನ್ನ ಸಹೋದರನನ್ನು* ತೀರ್ಪು ಮಾಡುವವನಾಗಿದ್ದಾನೆ, ..." (ಒತ್ತಿ ಹೇಳಿದ್ದು ನನ್ನದು.) ಕುಟುಂಬಗಳಲ್ಲಿ ಸಹೋದರರೆಲ್ಲರೂ ಪ್ರೀತಿಯಿಂದ ಹೊಂದಾಣಿಕೆಯಾಗಿರುತ್ತಾರೆ (ರೋಮಾಪುರ 12:10; ಗಲಾತ್ಯ 6:10). ಗ್ರಂಥವು ತಿಳಿಸುವಂತೆ ನನ್ನ ಸಹೋದರನ ತಪ್ಪುಗಳನ್ನು ನಾನು ತಿಳಿದಿದ್ದರೆ ಅದನ್ನು ಇತರರಿಗೆ ತಿಳಿಸದೇ, ನನ್ನ ಸಹೋದರನ ಬಳಿಗೆ ನೇರವಾಗಿ ಹೋಗ ಬೇಕು. ಅದು ಬಹಳ ಸುಲಭವಾದ ಕಾರ್ಯವಲ್ಲ ಅಥವಾ ಅದನ್ನು ಮಾಡುವದು ಕಷ್ಟಕರವೆ, ಆದರೆ ನಮ್ಮ ಸಹೋದರನ ಮೇಲಿಟ್ಟಿರುವ ಪ್ರೀತಿಯು ನಾನು ಅದನ್ನು ಮಾಡಲೇಬೇಕೆಂದು ಪ್ರೋತ್ಸಾಹಿಸುತ್ತದೆ. ನನ್ನ ಸಹೋದರನ ಕುರಿತಾಗಿ ಇತರರ ಬಳಿ ಹೇಳುವಂತದ್ದು ದೇವರ ವಾಕ್ಯಕ್ಕೆ ಅನುಗುಣವಾಗಿರುವದಿಲ್ಲ.

**ಧರ್ಮಶಾಸ್ತ್ರವನ್ನು ಗೌರವಿಸುವದು**

ನನ್ನ ಸಹೋದರನ ಬಗ್ಗೆ ಮಾತನಾಡುವದು ಮಾತ್ರವಲ್ಲದೆ ಅದರ ಕುರಿತಾದ *ಧರ್ಮಶಾಸ್ತ್ರವನ್ನು ನಾನು ಗೌರವಿಸಬೇಕು.* "ಸಹೋದರನ ವಿಷಯವಾಗಿ ತೀರ್ಪು ಮಾಡಿದರೆ ಅವನು ಧರ್ಮಶಾಸ್ತ್ರವನ್ನು ನಿಂದಿಸಿ ಧರ್ಮಶಾಸ್ತ್ರದ ವಿಷಯದಲ್ಲಿ ತೀರ್ಪುಮಾಡಿದ ಹಾಗಾಗುವದು. ಆದರೆ ನೀನು ಧರ್ಮಶಾಸ್ತ್ರದ ವಿಷಯದಲ್ಲಿ ತೀರ್ಪುಮಾಡಿದರೆ ನೀನು ನ್ಯಾಯಧಿಪತಿ ಎಣಿಸಿಕೊಳ್ಳುವೆಯೇ ಹೊರತು ಅದನ್ನು ಅನುಸರಿಸುವವನಲ್ಲ." "ಧರ್ಮಶಾಸ್ತ್ರ ಎಂದರೇನು?" ಸಹಜವಾಗಿ, ಯಾಕೋಬನು ಹಳೆಯ ದರ್ಮಶಾಸ್ತ್ರದ ಕುರಿತು ಹೇಳುತ್ತಿಲ್ಲ. ಹಿಂದೆ ತಿಳಿಸಿರುವ ವಾಕ್ಯದಂತೆ ಇದು "ರಾಜಾಜ್ಞೆ" (2:8) ಮತ್ತು "ಬಿಡುಗಡೆಯನ್ನುಂಟು ಮಾಡುವ ಧರ್ಮಪ್ರಮಾಣ ವಾಗಿರುತ್ತದೆ" (2:12). ನಾವು ಮಾಡುವಂತ ಕಾರ್ಯಗಳ ಮೂಲಕ ಉಂಟಾಗುವ ಸೂಚನೆಗಳನ್ನು ನಾವು ತಿಳುಕೊಳ್ಳಬೇಕು. ಮೊದಲನೆಯದಾಗಿ, ದೇವರಿಗೆ ವಿಧೇಯರಾಗುವ ಬದಲು, ಆತನ ಧರ್ಮಶಾಸ್ತ್ರವನ್ನು ಮುರಿಯುವವರಾಗಿರುತ್ತೇವೆ. ಎರಡನೆಯದಾಗಿ, ಧರ್ಮಶಾಸ್ತ್ರಕ್ಕಿಂತಲೂ ಉನ್ನತವಾದ ಸ್ಥಾನದಲ್ಲಿರುವವೆಂದು ತಿಳಿಯುತ್ತೇವೆ. ಧರ್ಮಶಾಸ್ತ್ರವು, "ಒಬ್ಬರನ್ನೊಬ್ಬರು ಪ್ರೀತಿಸಿರಿ" ಎಂದು ಹೇಳುತ್ತದೆ, ಆದರೆ ನಮ್ಮ ಕ್ರಿಯೆಗಳ ಮೂಲಕ ಈ ಮಾತು ಅಪಾರ್ಥಕ್ಕೆ ಈಡಾಗಿದೆ. ಆದುದರಿಂದ ಇದನ್ನು ನಾವು, "ಪರಸ್ಪರ ಟೀಕೆ ಮತ್ತು ಚಾಡಿ ಹೇಳುವವರು" ಎಂದು ತಿಳಿದಿದ್ದೇವೆ. ಇದರ ಮೂಲಕವಾಗಿ ದೇವರು ಮನುಷ್ಯನಿಗೆ ನೀಡಿದಂತ ನಿಯಮಗಳನ್ನು ದೇವರಿಗಿಂತಲೂ ಅಧಿಕವಾಗಿ ತಿಳಿದಿದ್ದೇವೆಂದು ಸಾಕ್ಷಿಕರೀಸುತ್ತೇವೆ.

**ದೇವರನ್ನು ಗೌರವಿಸುವದು**

ಮೂರನೇಯದಾಗಿ, ನಾವು ದೇವರನ್ನು ಗೌರವಿಸುವದರಿಂದ, ಇತರರ ಬಗ್ಗೆ ಮಾತನಾಡಬಾರದು. ಯಾಕೋಬನ ಹೇಳಿಕೆ ಏನೆಂದರೆ, "ನ್ಯಾಯವನ್ನು ವಿಧಿಸಿದ ನ್ಯಾಯಧಿಪತಿ ಒಬ್ಬನೆ ಆತನೆ ಉಳಿಸುವದಕ್ಕೂ ನಾಶಮಾಡುವದ್ಕೂ ಶಕ್ತನು ..." (2:12). ಆತನೊಬ್ಬನೇ ನ್ಯಾಯವನ್ನು ನೀಡುವವನು, ಆತನೊಬ್ಬನೆ ಅದನ್ನು ಬದಲಾಯಿಸಬಹುದು ಅಥವಾ ಮಾರ್ಪಡಿಸಬಹುದು. ನಮ್ಮ ಕ್ರಿಯೆಗಳು ಆತನ ಧರ್ಮಶಾಸ್ತ್ರವನ್ನು ಬದಲಾಯಿಸಲು ಸಾಧ್ಯವಿಲ್ಲ. ಅವುಗಳು ಅದನ್ನು ಮುರಿಯುತ್ತವೆಯಷ್ಟೆ, ನಿಯಮಗಳನ್ನು ನೀಡಿರುವ ದೇವರಿಗಿಂತಲು ನಾವು ಹೆಚ್ಚಿನವರು ಎಂದು ತಿಳಿಯುವುದು, ಮೂರ್ಖತನವಾಗಿದೆ. ದೇವರು ಧರ್ಮಶಾಸ್ತ್ರವನ್ನು ನೀಡಿರುವನು ಮತ್ತು ಆತನೊಬ್ಬನೇ ನ್ಯಾಯಾಧಿಪತಿಯು ಆಗಿದ್ದಾನೆ. ನ್ಯಾಯದೀಶನಾಗುವದಕ್ಕೆ ಆತನೊಬ್ಬನೆ ಯೋಗ್ಯನಾಗಿದ್ದಾನೆ. ಆತನು ಎಲ್ಲವನ್ನು ತಿಳಿದಿರುವವನು, ಆತನಲ್ಲಿ ಯಾವ ವಿಧವಾದ ಪಾಪವು ಇರುವದಿಲ್ಲ, ಆತನು ನಮ್ಮನ್ನು ಸೃಷ್ಟಿಸಿರುವದರಿಂದ, ನಮ್ಮನ್ನು ತಿಳುಕೊಂಡಿದ್ದಾನೆ. ನಮ್ಮ ಸಹೋದ ರನನ್ನು ನಿಂದಿಸುವುದಾದರೆ, ನಾವು ನ್ಯಾಯಧಿಪತಿಗಳು ಅನ್ನಿಸಿಕೊಳ್ಳುತ್ತೇವೆ ಎಂಬ ಸೂಚನೆಯನ್ನು ಇಲ್ಲಿ ಗಮನಿಸುತ್ತೇವೆ. ದೇವರೊಬ್ಬನೆ ನ್ಯಾಯವನ್ನು ನಿರ್ಣಯಿಸಲು ಯೋಗ್ಯನಾಗಿದ್ದಾನೆ.

**ನಮ್ಮನ್ನು ಗೌರವಿಸಿಕೊಳ್ಳಬೇಕು**

ನಾಲ್ಕನೆಯದಾಗಿ, ನಮ್ಮ ಗೌರವವನ್ನು ಉಳಿಸುವ ಸಲುವಾಗಿ, ಇತರರನ್ನು ನಾವು ನಿಂದಿಸಬಾರದು, ವಚನ 11ರಲ್ಲಿ NIVಯು ಬಲಹೀನವಾಗಿದ್ದರು, ವಚನ (4:12ರಲ್ಲಿ), "... ಹೀಗಿರುವಾಗ ನಿನ್ನ ನೆರೆಯವನ ವಿಷಯದಲ್ಲಿ ತೀರ್ಪು ಮಾಡುವದಕ್ಕೆ ನೀನು ಯಾರು?" ಎಂಬ ಬಲಪ್ರಯೋಗವಾಗಿದೆ. ವಾಃ! ನನ್ನ ಕಣ್ಣುಗಳ ಮಧ್ಯದಲ್ಲಿ ಸಕಲವಿಧವಾದ ಬಲಹೀನತೆಯನ್ನು ತುಂಬಿಕೊಂಡು; ನನ್ನ ಹೋರಾಟ, ಸಮಸ್ಯೆ, ಮತ್ತು ಪಾಪದ ನಡುವೆ ಮತ್ತೊಬ್ಬನನ್ನು ತೀರ್ಪುಮಾಡುವದಕ್ಕೆ ನಾನು ಯಾರು? ಇನ್ನೊಬ್ಬ ಸಹೋದರನ ವಿಷಯದಲ್ಲಿ,

ನಾನು ನಡಕೊಳ್ಳುವಂಥ ವರ್ತನೆಯ ಮೂಲಕ, ಯೇಸು ನನ್ನನ್ನು ಹೀನವಾಗಿ ನೋಡಿ, "ಕಪಟಿ!" ಎಂದು ಕರೆಯುತ್ತಾನೆ.

## ಮುಕ್ತಾಯ

ನಿಂದನೆಯನ್ನು ಸಹಜವಾಗಿ ಒಂದು ಚಿಕ್ಕದಾದ ಪಾಪವೆಂದು ಪರಿಗಣಿಸುತ್ತೇವೆ. "ಇತರ ಪಾಪಕ್ಕೆ ಇದನ್ನು ಹೋಲಿಸಿದರೆ, ಇದು ಚಿಕ್ಕದ್ದೆ" ಪ್ರಪಂಚವು ಅದನ್ನು ಒಂದು ಕಲೆಯನ್ನಾಗಿ ಮಾಡಿರುತ್ತದೆ - ಸುದ್ಧಿ ಪತ್ರಿಕೆಗಳಲ್ಲಿ ನಿಂದನೆಗಾಗಿಯೇ ಕೆಲವು ಪುಟಗಳು ಮೀಸಲಾಗಿವೆ ಮತ್ತು ದೂರದರ್ಶನದಲ್ಲೂ ನಿಂದನೆಯ ಕಾರ್ಯಕ್ರಮಗಳನ್ನು ನೋಡುತ್ತೇವೆ. ದೇವರು ಈ ವಿಧವಾಗಿ ನೋಡುವವನಾಗಿದ್ದಾನೆಯೇ? ನಿಂದನೆಯು, ದೇವರ ಕುಟುಂಬದ ಸಂಬಂಧಗಳ ಉಲ್ಲಂಘನೆಯಾಗಿರುತ್ತದೆ. ಇದರಿಂದ ನಾವು ರಾಜಾಜ್ಞೆಯನ್ನು ಉಲ್ಲಂಘಿಸುವವರಾಗಿದ್ದೇವೆ. ನಾವು ನಮ್ಮನ್ನು ದೇವರ ಸ್ಥಾನಕ್ಕೆ ಏರಿಸಿಕೊಂಡು, ನಮ್ಮ ಪಾಪವನ್ನೆ ಅರಿಯದವರಾಗಿದ್ದೇವೆ, ಇತರರನ್ನು ನಿಂದಿಸದಂತೆ "ನಮ್ಮ ಬಾಯಿಗಳಿಗೆ ಕಡಿವಾಣ ಹಾಕಿಕೊಳ್ಳೊಣ."